ಆಲ್ಬರ್ಟ್ ಮೆಲ್ಲಗೆ ಅವಳಿಂದ ದೂರಸರಿದು ತೊಟ್ಟಿಲಿನ ಬಳಿಗೆ ಹೋದ. ಮಗುವಿನ ಮೇಲೊಮ್ಮೆ ದೃಷ್ಟಿ ಹಾಯಿಸಿದ. ಕತ್ತಲಿನಲ್ಲಿ ಮಗುವಿನ ಮುಖ ಕಾಣುತ್ತಿರಲಿಲ್ಲವಾದರೂ ಅದು ಉಸಿರೆಳೆದುಕೊಳ್ಳುವ ಸದ್ದು ಸ್ಪಷ್ಟವಾಗಿ ಕೇಳಿಸುತ್ತಿತ್ತು.

''ಮಗುವಿಗೆ ಮುಂದಿನ ಫೀಡ್ ಯಾವಾಗ?'' ಅವನು ಕೇಳಿದ.

''ಬೆಳಗಿನ ಜಾವ ಎರಡಕ್ಕೆ...'' ಮೇಬಲ್ ನಿದ್ದೆಯಲ್ಲೇ ಹೇಳಿದಳು.

''ನಂತರದ್ದು?''

''ಬೆಳಗ್ಗೆ ಆರಕ್ಕೆ.''

''ಡಾರ್ಲಿಂಗ್, ನೀನು ಮಲಗಿರು. ಎರಡೂ ಫೀಡಿಂಗ್‌ಗಳನ್ನು ನಾನೇ ನೋಡಿಕೊಳ್ಳುತ್ತೇನೆ.'' ಆಲ್ಬರ್ಟ್ ಹೇಳಿದ.

ಅವಳು ಮಾತನಾಡಲಿಲ್ಲ.

''ನೀನು ಏನೂ ಚಿಂತೆ ಮಾಡಬೇಡ ಮೇಬಲ್... ಹಾಯಾಗಿ ಮಲಗು. ಮುಂದಿನ ಹನ್ನೆರಡು ಗಂಟೆ ನನ್ನ ಲೆಕ್ಕಕ್ಕಿರಲಿ. ನನ್ನನ್ನು ನಂಬು. ಇಲ್ಲಾಂದ್ರೆ ನೀನು ಮಾನಸಿಕ ರೋಗಿಯಾಗ್ತೀಯಾ ಅಷ್ಟೇ...''

''ಆಯ್ತು ಡಿಯರ್...''

''ನಾನು ಅಲರಾಂ ಇಟ್ಟಾಯ್ತು. ತೊಟ್ಟಿಲನ್ನು ಪಕ್ಕದ ರೂಮಿಗೆ ತಳ್ಳಿಕೊಂಡು ಹೋಗುತ್ತಿದ್ದೇನೆ. ನೀನು ಕಿಂಚಿತ್ತೂ ತಲೆಕೆಡಿಸಿಕೊಳ್ಳಬೇಡ. ಆರಾಮಾಗಿ ನಿದ್ದೆ ಮಾಡು.''

''ಆಲ್ಬರ್ಟ್!... ಐ ಲವ್ ಯೂ ಸೋ ಮಚ್!'' ಮೇಬಲ್ ನಿದ್ದೆಯಲ್ಲೇ ಹೇಳಿದಳು.

''ಐ ಟೂ ಲವ್ ಯೂ ಮೇಬಲ್. ಆರಾಮಾಗಿ ನಿದ್ದೆ ಮಾಡು ಡಿಯರ್.'' ಅವನು ಹೇಳಿದ.

★★★

ಮರುದಿನ ಬೆಳಗ್ಗೆ ಹನ್ನೊಂದರವರೆಗೂ ಆಲ್ಬರ್ಟನಿಗೆ ಮೇಬಲಳ ದರ್ಶನವಾಗಲಿಲ್ಲ. ನಂತರ...

''ಆಲ್ಬರ್ಟ್!... ಏನಿದು ಡಿಯರ್!! ನಾನು ಸುಮಾರು ಹನ್ನೆರಡು ಗಂಟೆ ಗಡದ್ದಾಗಿ ನಿದ್ದೆ ಮಾಡಿದ್ದೇನೆ. ಏನಾಗಿದೆ ನನಗೆ?''

ಅವನು ಆರಾಮಕುರ್ಚಿಯಲ್ಲಿ ಒರಗಿ ಕುಳಿತು ಅಂದಿನ ಪತ್ರಿಕೆಯ ಮೇಲೆ ಕಣ್ಣಾಡಿಸುತ್ತಿದ್ದ. ಬಾಯಾಲ್ಲಿದ್ದ ಪೈಪು ಹೊಗೆ ಉಗುಳುತ್ತಿತ್ತು. ಮಗು ಅವನ ಪಕ್ಕದಲ್ಲೇ ತೊಟ್ಟಿಲಿನಲ್ಲಿ ಸ್ವಸ್ಥವಾಗಿ ನಿದ್ರಿಸುತ್ತಿತ್ತು.

''ಹಲೋ ಡಾರ್ಲಿಂಗ್!...'' ಅವನು ಮುಗುಳ್ನಕ್ಕ.

ಅವಳು ತೊಟ್ಟಿಲಿನ ಬಳಿ ಧಾವಿಸಿದಳು. ''ಮಗು ಹಾಲು ಕುಡಿದ್ಯಾ? ಎಷ್ಟು ಬಾರಿ? ಬೆಳಗ್ಗೆ ಹತ್ತು ಗಂಟೆಗೊಮ್ಮೆ ಕೊಡಬೇಕಿತ್ತು. ಕೊಟ್ಟಿದಿರೋ ಇಲ್ವೋ?'' ಮೇಬಲ್ ಒಂದರ ಹಿಂದೆ ಒಂದು ಪ್ರಶ್ನೆ ಕೇಳತೊಡಗಿದಳು.

ಆಲ್ಬರ್ಟ್ ಪತ್ರಿಕೆಯನ್ನು ಮಡಚಿ ಟೀಪಾಯ್ ಮೇಲಿಟ್ಟ. ''ನಾನು ಬೆಳಗಿನ ಜಾವ ಎರಡಕ್ಕೆ ಒಮ್ಮೆ ಅವಳಿಗೆ ಫೀಡ್ ಮಾಡಿದೆ. ಹೆಚ್ಚೆಂದರೆ ಅರ್ಧ ಔನ್ಸ್ ಕುಡಿದಳೆಂದು ಕಾಣುತ್ತೆ. ಬೆಳಗ್ಗೆ ಆರಕ್ಕೆ ಸುಮಾರು ಎರಡು ಔನ್ಸ್ ಹಾಲು ಕುಡಿದಳು.''

''ಏನಂದೆ ಆಲ್ಬರ್ಟ್? ಎರಡು ಔನ್ಸಾ? ಇದು ಖಂಡಿತ ಅಚ್ಚರಿಯ ವಿಷಯವೇ ಹೌದು.''

''ಹತ್ತು ನಿಮಿಷಗಳ ಮೊದಲು ಮತ್ತೊಮ್ಮೆ ಕುಡಿದಳು. ಫೀಡಿಂಗ್ ಬಾಟಲು ಅಲ್ಲಿ ಸ್ಟ್ಯಾಂಡಿನ ಮೇಲಿದೆ ನೋಡು. ಅದರಲ್ಲಿ ಬರೇ ಒಂದು ಔನ್ಸ್ ಮಾತ್ರ ಉಳಕೊಂಡಿದೆ. ಅಂದರೆ ಮೂರು ಔನ್ಸ್ ಕುಡಿದಿದ್ದಾಳೆ!'' ಅವನು ಹೆಮ್ಮೆಯಿಂದ ನಗೆಯಾಡುತ್ತಾ ಅವಳೆಡೆಗೆ ನೋಡಿದ, 'ಬಾ, ನನ್ನ ಬೆನ್ನು ತಟ್ಟು' ಎಂಬಂತೆ!